2. 40 ಸಾಮಾನ್ಯ ದರ್ಜೆಯ ಟೆಂಟ್‌ಗಳು
3. 25 ಪೋರ್ಟಬಲ್ ಶೌಚಾಲಯಗಳು (ಚಿಕ್ಕದು)
4. 10 ಜಿ.ಪಿ.ಎಸ್ ಉಪಕರಣಗಳು
5. 100 ಸ್ಲೀಪಿಂಗ್ ಬ್ಯಾಗ್‌ಗಳು ವಿತ್ ಮ್ಯಾಟ್
6. 20 ಸೈಕಲ್ ಮತ್ತು ಹೆಲ್ಮೆಟ್‌ಗಳು
7. 10 ಜೋಡಿ ಹಾಸಿಕೆಗಳ ಲಾಗ್ ಹಟ್ಸ್
8. ಆನೆಗಳ ಮಾಹಿತಿ ಕೇಂದ್ರ ಮತ್ತು ಗ್ರಂಥಾಲಯ
9. ಟ್ರಕ್ಕಿಂಗ್ ಮತ್ತು ಆನೆಲಾಯಗಳ ಅಭಿವೃದ್ಧಿ.

ಈ. ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಹಂತ ಹಂತವಾಗಿ ಗಣ ಬಿಡುಗಡೆ ಮಾಡಲಾಗುತ್ತಿದೆ.

ಉ. ಕೊಡಗು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯವು 46084 ಲಕ್ಷಗಳ ಅಂದಾಜು ವೆಚ್ಚದ ಯೋಜನೆಗಳಿಗೆ ಅನುಮೋದನೆ ನೀಡಿ 157.84 ಲಕ್ಷರೂಗಳನ್ನು ಬಿಡುಗಡೆ ಮಾಡಿರುತ್ತದೆ. ಉಳಿದ 303.00 ಲಕ್ಷರೂಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

196 (439) ಶ್ರೀ ಬೋಪಯ್ಯ ಕೆ.ಜಿ (ಮಡಿಕೇರಿ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕೊಡಗು ಜಿಲ್ಲೆಯ ಸಂಬಂಧಪಟ್ಟಂತೆ ಕುಶಾಲನಗರದಲ್ಲಿ 220 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲು ಅನುಮತಿ ನೀಡಿರುವುದು ನಿಜವಲ್ಲವೆ;

ಆ. ಸುಂಠಿಕೊಪ್ಪ, ಮಡಿಕೇರಿ, ವಿರಾಜಪೇಟೆಯಲ್ಲಿಯೂ ಸಹ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆಯೇ;

ಇ. ಈ ವಿದ್ಯುತ್ ವಿತರಣಾ ಕೇಂದ್ರವನ್ನು ಇದುವರೆಗೂ ಪ್ರಾರಂಭಿಸದೇ ಇರಲು ಕಾರಣವೇನು;

ಈ. ವಿತರಣಾ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ. ಹೌದು. ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ 220 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸ್ಥಾಪಿಸುವ 44.81 ಕೋಟಿ ರೂ.ಗಳ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ. ಹೌದು. ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಹೊಸದಾಗಿ ಒಂದು 66/33/11 ಕೆ.ವಿ ವಿದ್ಯುತ್ ಉಪ–ಕೇಂದ್ರದ ಸ್ಥಾಪನೆ ಹಾಗೂ ಸುಂಠಿಕೊಪ್ಪ ಮತ್ತು ವಿರಾಜಪೇಟೆಯಲ್ಲಿ ಹಾಲಿ ಇರುವ 33 ಕೆ.ವಿ.ವಿದ್ಯುತ್ ಉಪಕೇಂದ್ರಗಳನ್ನು 66 ಕೆ.ವಿ.ಗೆ ಮೇಲ್ದರ್ಜೆಗೊಳಿಸುವಿಕೆಗಳನ್ನು ಒಳಗೊಂಡ 18.16 ಕೋಟಿ ರೂ.ಗಳ ಮಡಿಕೇರಿ ಸಮಗ್ರ ಯೋಜನೆಯನ್ನು ರೂಪಿಸಲಾಗಿದೆ.

ಇ.ಈ. ವಿದ್ಯುತ್ ವ್ಯವಸ್ಥೆಯಲ್ಲಿ ಹೊಸ 220 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರಗಳನ್ನು ಸೇರ್ಪಡೆಗೊಳಿಸುವ ಕಾರ್ಯವನ್ನು ಅವಶ್ಯಕತೆಯ ಪ್ರಕಾರ ನಿರ್ವಹಿಸಲಾಗುತ್ತಿದ್ದು, ಕುಶಾಲನಗರದಲ್ಲಿ ಡಿಸೆಂಬರ್ 2007ರ ವೇಳೆಗೆ 220 ಕೆ.ವಿ ವಿದ್ಯುತ್ ಸ್ವೀಕರಣ ಕೇಂದ್ರದ ಅವಶ್ಯಕತೆ ಇರುತ್ತದೆ. ಆದುದರಿಂದ ಈಗ ಟೆಂಡರಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಟೆಂಡರಿಂಗ್ ಪ್ರಕ್ರಿಯೆ ಅಂತಿಮ ಹಂತ ತಲುಪಿದ್ದು, ಗುತ್ತಿಗೆದಾರರನ್ನು ಶೀಘ್ರದಲ್ಲಿಯೇ ಗೊತ್ತುಪಡಿಸಿ, ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಪ್ರಸರಣ ಮಾರ್ಗಗಳು ಬಹುಪಾಲು ಅರಣ್ಯ ಪ್ರದೇಶಗಳ ಮೂಲಕವೇ ಹಾದು ಹೋಗಬೇಕಾಗಿರುವುದರಿಂದ ಅರಣ್ಯ ತೆರವಿಗೆ (ಫಾರೆಸ್ಟ ಕ್ಲಿಯರೆನ್ಸ್) ಅನುಮತಿ ಪಡೆಯುವಲ್ಲಿ ಹೆಚ್ಚಿನ ಸಮಸ್ಯೆಗಳನ್ನು ಎದುರಿಸಲಾಗುತ್ತಿದೆ. ಇದು ವಿದ್ಯುತ್ ಪ್ರಸರಣ ಮಾರ್ಗಗಳ ನಿರ್ಮಾಣದ ಕಾರ್ಯಗಳಲ್ಲಿನ ವಿಳಂಬಕ್ಕೆ ಬಹು ಮುಖ್ಯ ಕಾರಣವಾಗಿದೆ. ಆದಾಗ್ಯೂ ಈಗ 66 ಕೆ.ವಿ ವಿದ್ಯುತ್ ಪ್ರಸರಣಾ ಮಾರ್ಗಗಳ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ವಿರಾಜಪೇಟೆ, ಶುಂಠಿಕೊಪ್ಪಗಳಲ್ಲಿ ಹಾಲಿ ಇರುವ 33 ಕೆ.ವಿ.ವಿದ್ಯುತ್ ಉಪ ಕೇಂದ್ರಗಳನ್ನು 66 ಕೆ.ವಿ.ಗೆ ಮೇಲ್ದರ್ಜೆಗೊಳಿಸುವುದು ಮತ್ತು ಮಡಿಕೇರಿಯಲ್ಲಿ 66 ಕೆ.ವಿ.ವಿದ್ಯುತ್ ಉಪ ಕೇಂದ್ರದ ನಿರ್ಮಾಣ – ಈ ಕಾಮಗಾರಿಗಳ ನಿರ್ವಹಣೆಗೆ ಗುತ್ತಿಗೆದಾರರನ್ನು ಗೊತ್ತುಪಡಿಸಲಾಗಿದ್ದು, ಕಾಮಗಾರಿಗಳನ್ನು ಈಗ ಪ್ರಾರಂಭಿಸಲಾಗಿದೆ.